ಧ್ವಜ ಇರಬಾರದು ಎನ್ನುವ ಮಾತನ್ನು, ತಾವು ಸಹ ಆಪ್ಷಣ್ ಕೊಡಿಸಿರುವಾಗ. ಈ ರೀತಿ ಇವರು ತಪ್ಪಿಸಿಕೊಳ್ಳುವಂಥ, ಸುತ್ತಿ ಬಳಸುವ ನಿರ್ಧಾರಕ್ಕೆ ಬರಬಾರದು, ದಯಮಾಡಿ ಹೇಳಿ.

ಅಧ್ಯಕ್ಷರು:- ಸರ್ಕಾರ ತೀರ್ಮಾನ ತೆಗೆದುಕೊಂಡು, ಒಂದು ನಿರ್ಧಾರ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರಲ್ಲ.

ಶ್ರೀ ವಾಟಾಳ್ ನಾಗರಾಜ್:- ಆರು ತಿಂಗಳಿಂದ ಮೂರು ಬಾರಿ ಇದೇ ಮಾತನ್ನು ಹೇಳುತ್ತಿದ್ದಾರೆ, ಇದೇ ಮಾತನ್ನು ಆಡುತ್ತಿದ್ದಾರೆ ಇದು ಸಮಂಜಸವಾದ ಉತ್ತರ ಆಲ್ಲ. ಸರ್ಕಾರ ತೆಗೆದುಕೊಳ್ಳತಕ್ಕ ನಿರ್ಧಾರ ಇದೇ?

ಶ್ರೀ ಕೆ. ಲಕ್ಕಪ್ಪ:- ಅಧ್ಯಕ್ಷರೇ, ಈ ಸಭೆಯು ಈ ದಿವಸ ಮುಕ್ತಾಯವಾಗುತ್ತದೆಂದು ಕೇಳಿದ್ದೇನೆ. ಇಲ್ಲಿ ಆನೇಕ ವಿಚಾರಗಳನ್ನು ಚರ್ಚೆ ಮಾಡಿದ್ದೇವೆ, ಬಹಳ ಪ್ರಮುಖವಾದ ವಿಚಾರಗಳ ಬಗ್ಗೆ ಈ ಸದನದ ಎಲ್ಲಾ....

ಶ್ರೀ ವಾಟಾಳ್ ನಾಗರಾಜ್:- ಅಧ್ಯಕ್ಷರೇ, ಈ ಬಗ್ಗೆ ಒಂದು ನಿರ್ಧಾರಕ್ಕೆ ಬರಬೇಕು, ಇಲ್ಲದೇ ಹೋದರೆ ನಿಮ್ಮ ಮುಂದೆ ಬಂದು ಕುಳಿತುಕೊಳ್ಳಬೇಕಾಗುತ್ತದೆ. ನನಗೆ ಬೇರೆ ವಿಧಿಯೇ ಇಲ್ಲ. ತಾವು ಏನು ತಿಳಿದುಕೊಂಡರೂ ಚಿಂತೆ ಇಲ್ಲ, ನಾನು ಆರು ತಿಂಗಳಿಂದ ಒಂದೇ ಸಮನಾಗಿ ಕೇಳುತ್ತಿದ್ದೇನೆ.

ಅಧ್ಯಕ್ಷರು:-- ನಾನು ಏನೂ ತಿಳಿದುಕೊಳ್ಳುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ನಾನು ಇಲ್ಲಿ ಸಭಾಧ್ಯಕ್ಷನಾಗಿ, ಇಲ್ಲಿ ಕಾರ್ಯಕಲಾಪಗಳ ರೂಲ್ಸ್ ಏನಿದೆ, ಆದರ ಪ್ರಕಾರ ಸಭೆ ನಡೆಸುವುದೊಂದೇ ನನಗಿರತಕ್ಕ ಕೆಲಸ. ಆದ್ದರಿಂದ ನಾನು ತಪ್ಪು ತಿಳಿದುಕೊಳ್ಳುವುದೂ ಇಲ್ಲ, ಒಪ್ಪು ತಿಳಿದುಕೊಳ್ಳುವುದೂ ಇಲ್ಲ. ನಾನು ಈ ನಿರ್ಧಾರಕ್ಕೆ ಬಂದಿದ್ದೇನೆ. ನೀವು ಪ್ರಶ್ನೆ ಎತ್ತಬೇಕೆಂದು ನನ್ನನ್ನು ಬಂದು ಕೇಳಿದಿರಿ, ನಾನು ಅವಕಾಶ ಕೊಟ್ಟೆ, ಸರ್ಕಾರದವರು ಉತ್ತರ ಕೊಟ್ಟದ್ದಾರೆ. ಇನ್ನು ಮುಂದಿರತಕ್ಕಂತಾದ್ದು, ನಿಮ್ಮದು ಮತ್ತು ಸರ್ಕಾರದ್ದು. ನನ್ನ ಜವಾಬ್ದಾರಿ ಏನಿಲ್ಲ...

(ಈ ಪಂತದಲ್ಲಿ ಶ್ರೀ ವಾಟಾಳ್ ನಾಗರಾಜ್ ಅವರು ಸಭಾಧ್ಯಕ್ಷರ ಪೀಠದ ಬಳಿ ಬಂದು ಧರಣಿ ಕುಳಿತರು.)

ಶ್ರೀ ಕೆ. ಲಕ್ಕಪ್ಪ:- ಮಾನ್ಯ ಅಧ್ಯಕ್ಷರೇ, ಈ ಸಭೆಗೆ ಆರಿಸಿ ಬರಲು ಅವಕಾಶ ಮಾಡಿಕೊಟ್ಟಂಥ ಮತದಾರರ ಬಗ್ಗೆ ಅವರ ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ಈ ಸಭೆಯಲ್ಲಿ ಒಂದು ದಿವಸವೂ ಚರ್ಚೆ ಮಾಡಲಿಲ್ಲ. ಈ ಬಗ್ಗೆ ನಾನು ಆನೇಕ ಸಲ ತಮ್ಮ ಗಮನ ಸೆಳೆದೆ. ಹಳೆಯ ಮೈಸೂರು ಭಾಗದಲ್ಲಿ ವಿಪರೀತ ಅಭಾವ ಪರಿಸ್ಥಿತಿ ಇದೆ, ಕೆಲವು ಭಾಗದಲ್ಲಿ ಮಳೆಯಾಗಿ ತೊಂದರೆ ಇಲ್ಲದಿರಬಹುದು. ಆದರೆ ಹಳೆಯ ಮೈಸೂರು ಭಾಗದಲ್ಲಿ ಬಹಳ ಅಭಾವ ಪರಿಸ್ಥಿತಿ ಇದೆ, ಬಿತ್ತನೆ ಕೆಲಸಗಳು ಆಗಿಲ್ಲ, ಕೆಲಸಗಳು ದೊರಕುತ್ತಾ ಇಲ್ಲ. ಜೊತೆಗೆ ಜಿಲ್ಲಾಪರಿಷತ್ ಸಂಸ್ಥೆಗಳಲ್ಲಿಯೂ ಕೂಡ, ಪಣ ಇಲ್ಲದೇ ಕೆಲಸ ಒದಗಿಸುವುದಕ್ಕೆ ಆಗುತ್ತಿಲ್ಲ. ಈ ಬಗ್ಗೆ ಒಂದು ದಿವಸದ ಚರ್ಚೆಗೆ ತಾವು ಅವಕಾಶ ಕೊಡಬಹುದಿತ್ತು. ಆದರೆ, ಆನೇಕ ಒತ್ತಡಗಳ ಕಾರಣ, ಸಮಯ ಇಲ್ಲದೇ ಕೊಟ್ಟಿಲ್ಲವೆಂದು ಕಾಣುತ್ತದೆ. ಈಗಲಾದರೂ ಸರ್ಕಾರ ಕೊನೆ ದಿವಸವಾದರೂ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಲಿ, ಇಲ್ಲದಿದ್ದರೆ ಈ ಸಭೆಗೆ ಆಶ್ವಾಸನೆ ಕೊಟ್ಟು ಕಾಮಗಾರಿ ಕೆಲಸಗಳು, ಹುಲ್ಲು, ನೀರು, ವ್ಯವಸ್ಥೆಗಳು ನಮ್ಮ ಜನರಿಗೆ ಸಿಗತಕ್ಕ ಹಾಗೂ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಆಸಕ್ತಿ ವಹಿಸತಕ್ಕಂಥ ಒಂದು ಭರವಸೆಯನ್ನು ಕೊಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಪ್ರಾರ್ಥನೆ ಮಾಡುತ್ತಿದ್ದೇನೆ.

† ಶ್ರೀ ಕಾಗೋಡು ತಿಮ್ಮಪ್ಪ:- ಮಾನ್ಯ ಅಧ್ಯಕ್ಷರೇ, ಮಾನ್ಯ ವಾಟಾಳ್ ನಾಗರಾಜ್‌ರವರು ಎತ್ತಿರತಕ್ಕ ಪ್ರಶ್ನೆಯ ವಿಚಾರದಲ್ಲಿ ಅವರು ಸ್ವಲ್ಪ ಮುಂದೆ ಹೋಗಿದ್ದಾರೆ. ಏಕೆಂದರೆ ಬೆಳಗಾಂ ಬಗ್ಗೆಯಾಗಲೀ, ಗಡಿ ಬಗ್ಗೆಯಾಗಲೀ, ನಮಗೂ ಆಷ್ಟೇ ಕುತೂಹಲ ಇದೆ, ಕಳಕಳಿ ಇದೆ. ಕನ್ನಡ ರಾಷ್ಟ್ರ ಮತ್ತು ಕನ್ನಡ ರಾಜ್ಯ, ಕನ್ನಡ ದೇಶ ಇವುಗಳ ಬಗ್ಗೆ ನಮಗೂ ಆಷ್ಟೇ ಆಭಿಮಾನ ಇದೆ, ಕಳಕಳಿ ಇದೆ; ಇದನ್ನು ರಕ್ಷಿಸಬೇಕು, ಉಳಿಸಬೇಕು ಎನ್ನುವುದರ ಬಗ್ಗೆ ಅವರಿಗಿಂತ ಕಡಿಮೆ ಕಳಕಳಿ ಏನೂ ಇಲ್ಲ. ಮಾನ್ಯ ಸಚಿವರು ಏನು ಪ್ರಸ್ತಾಪ ಮಾಡಿದರು ಅಂದರೆ, ಸ್ಥಳೀಯ ಸಂಸ್ಥೆಗಳು ತಮ್ಮ ಕಟ್ಟಡದ ಮೇಲೆ ಧ್ವಜ ಹಾಕತಕ್ಕಂಥ ವಿಚಾರದಲ್ಲಿ ಕಾನೂನಿನಲ್ಲಿ ಒಂದು ನಿಯಂತ್ರಣ